# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 853
ಸದಸ್ಯರ ಹೆಸರು : ಶ್ರೀ ಮಂಜುನಾಥ ಭಂಡಾರಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)
ಉತ್ತರಿಸುವ ಸಚಿವರು : ಮಾನ್ಯ ಗಣಿ ಮತ್ತು ಭೂ ವಿಜ್ಞಾನ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ ವಿಕಲಚೇತನರ ಮತ್ತು ಹಿರಿಯ ನಾಗರೀಕರ ಸಬಲೀಕರಣ ಸಚಿವರು.
ಉತ್ತರಿಸುವ ದಿನಾಂಕ : 20.09.2022

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ಪ್ರಸ್ತುತ ಅಂಗನವಾಡಿಗಳಿಗೆ ಸರ್ಕಾರ ವಿವಿಧ ಕಾರ್ಯಕ್ರಮಗಳಿಗೆ ನೀಡುವ ಅನುದಾನ ಎಷ್ಟು; ವಿವಿಧ ಸಭೆ ನಡೆಸಲು ನೀಡುವ ಫ್ಲೆಕ್ಸಿ ಫಂಡ್ ಅನುದಾನ ಎಷ್ಟು; ಮಕ್ಕಳ ಪೌಷ್ಠಿಕ ಆಹಾರಕ್ಕಾಗಿ ಹಾಗೂ ತರಕಾರಿಗೆ ನೀಡುವ ಅನುದಾನ ಎಷ್ಟು; ಆಟದ ಸಾಮಗ್ರಿಗೆ ಅನುದಾನ ಎಷ್ಟು; ಇನ್ನಿತರ ಎಲ್ಲಾ ಖರ್ಚುಗಳಿಗೆ ನೀಡುವ ಅನುದಾನ ಎಷ್ಟು; (ಕಾರ್ಯಕ್ರಮವಾರು ವಿಷಯವಾರು ಅನುದಾನದ ವಿವರ ನೀಡುವುದು) | • ಸಮಗ್ರ ಶಿಶು ಅಭಿವೃದ್ಧಿ ಯೋಜನೆಯಡಿ ಕೇಂದ್ರ ಸರ್ಕಾರವು 6 ತಿಂಗಳಿಂದ 6 ವರ್ಷದ ಮಕ್ಕಳಿಗೆ ಪೌಷ್ಠಿಕ ಆಹಾರಕ್ಕಾಗಿ ಘಟಕ ವೆಚ್ಚ ರೂ. 8.00/- ಗಳನ್ನು ಪ್ರತಿ ದಿನಕ್ಕೆ ನಿಗದಿಪಡಿಸಿರುತ್ತದೆ. ತರಕಾರಿ ವೆಚ್ಚವನ್ನು ಮೇಲಿನ ಘಟಕ ವೆಚ್ಚದಲ್ಲಿಯೇ ಭರಿಸಲಾಗುತ್ತಿದ್ದು, ಇದಕ್ಕೆ ಪ್ರತ್ಯೇಕ ಅನುದಾನ ನಿಗದಿಪಡಿಸಿರುವುದಿಲ್ಲ.<br>• ತೀವ್ರ ಅಪೌಷ್ಠಿಕ ಮಕ್ಕಳಿಗೆ ರೂ. 12.00/- ಹಾಗೂ ಗರ್ಭಿಣಿ /ಬಾಣಂತಿಯರಿಗೆ ರೂ. 9.50/- ಗಳ ಘಟಕ ವೆಚ್ಚವನ್ನು ನಿಗದಿಪಡಿಸಲಾಗಿದೆ.<br>• ಪ್ರಾಯಪೂರ್ವ ಬಾಲಕಿಯರಿಗೆ ರೂ. 9.50/-ಗಳ ಘಟಕ ವೆಚ್ಚವನ್ನು ನಿಗದಿಪಡಿಸಿದೆ.<br>• ಶಾಲಾಪೂರ್ವ ಶಿಕ್ಷಣ ಕಿಟ್ ಖರೀದಿಗೆ ಸಂಬಂಧಿಸಿದಂತೆ ಪ್ರತಿ ಅಂಗನವಾಡಿ ಕೇಂದ್ರಕ್ಕೆ 5 ವರ್ಷಕ್ಕೆ ರೂ.3,000/- ಗಳನ್ನು ಹಾಗೂ ಪ್ರತಿ ವರ್ಷ ರೂ. 1,000/-ಗಳಂತೆ 4 ವರ್ಷಗಳವರೆಗೆ ನಿಗದಿಪಡಿಸಲಾಗಿದೆ.<br>• ಔಷಧಿ ಕಿಟ್ ಖರೀದಿಗೆ ಸಂಬಂಧಿಸಿದಂತೆ ಮುಖ್ಯ ಅಂಗನವಾಡಿ ಕೇಂದ್ರಗಳಿಗೆ ವಾರ್ಷಿಕ ರೂ.1,500/- ಮತ್ತು ಮಿನಿ ಅಂಗನವಾಡಿ ಕೇಂದ್ರಗಳಿಗೆ ವಾರ್ಷಿಕ ರೂ.750/- ಗಳನ್ನು ನಿಗದಿಪಡಿಸಲಾಗಿರುತ್ತದೆ.<br>• ಪೋಷಣ್ ಅಭಿಯಾನ್ ಯೋಜನೆಯಡಿ ತಿಂಗಳಿಗೆ 02 ಸಮುದಾಯ ಆಧಾರಿತ ಚಟುವಟಿಕೆಗಳನ್ನು ನಡೆಸಲು ರೂ.500/- ಗಳನ್ನು ನಿಗದಿಪಡಿಸಲಾಗಿದೆ. ಇದಕ್ಕೆ ಯಾವುದೇ ಫ್ಲೆಕ್ಸಿ ಫಂಡ್ ನೀಡುತ್ತಿರುವುದಿಲ್ಲ.<br>• ಅಂಗನವಾಡಿ ಕಾರ್ಯಕರ್ತೆ / ಸಹಾಯಕಿಯರ 2 ಜೊತೆ ಸಮವಸ್ತ್ರಕ್ಕೆ ಪ್ರತಿಯೊಬ್ಬರಿಗೆ ರೂ.800/- ಗಳನ್ನು ನಿಗದಿಪಡಿಸಲಾಗಿದೆ.<br>• ಆಡಳಿತ ವೆಚ್ಚ ಪ್ರತಿ ಅಂಗನವಾಡಿ ಕೇಂದ್ರಗಳಿಗೆ ವಾರ್ಷಿಕ ರೂ. 2000/- ಹಾಗೂ ಮಿನಿ ಅಂಗನವಾಡಿ ಕೇಂದ್ರಗಳಿಗೆ ರೂ.1000/-ಗಳನ್ನು ನಿಗದಿಪಡಿಸಲಾಗಿದೆ.<br>• **ಪೀಠೋಪಕರಣ /ಪಾಕೋಪಕರಣ ಖರೀದಿ:** - ಪ್ರತಿ ಅಂಗನವಾಡಿ ಕೇಂದ್ರಗಳಿಗೆ ಪ್ರತಿ 5 ವರ್ಷಕ್ಕೊಮ್ಮೆ ರೂ. 10000/- ಹಾಗೂ ಮಿನಿ ಅಂಗನವಾಡಿ ಕೇಂದ್ರಗಳಿಗೆ ರೂ. 7000/-ಗಳನ್ನು ನಿಗದಿಪಡಿಸಲಾಗಿದೆ. |

| | | |
|---|---|---|
| | | • **ಅಂಗನವಾಡಿ ಕೇಂದ್ರಗಳ ಕಟ್ಟಡ ಬಾಡಿಗೆ:-**<br><br>ಗ್ರಾಮೀಣ/ಬುಡಕಟ್ಟು : ರೂ. 2,000/- ಪ್ರತಿ ತಿಂಗಳಿಗೆ<br>ನಗರ ಪ್ರದೇಶ : ರೂ. 6,000/- ಪ್ರತಿ ತಿಂಗಳಿಗೆ<br>ಮಹಾನಗರ ಪಾಲಿಕೆ : ರೂ. 8,000/- ಪ್ರತಿ ತಿಂಗಳಿಗೆ<br><br>**<u>ರಾಜ್ಯ ಸರ್ಕಾರದ ಯೋಜನೆಗಳು</u>: -**<br><br>• 6 ತಿಂಗಳಿಂದ 6 ವರ್ಷದ ಮಕ್ಕಳಿಗೆ ಕ್ಷೀರಭಾಗ್ಯ ಯೋಜನೆಯಡಿ 150 ಎಂ.ಎಲ್. ಹಾಲನ್ನು ರೂ.4.33 ರ ವೆಚ್ಚದಲ್ಲಿ ವಾರದಲ್ಲಿ 5 ದಿನ ನೀಡಲಾಗುತ್ತಿದೆ.<br><br>• "ಸೃಷ್ಟಿ" ಯೋಜನೆಯಡಿ 3 ರಿಂದ 6 ವರ್ಷದ ಮಕ್ಕಳಿಗೆ ವಾರದಲ್ಲಿ 02 ದಿನ ಕೋಳಿ ಮೊಟ್ಟೆಯನ್ನು ರೂ.6.00 ರ ಘಟಕ ವೆಚ್ಚದಲ್ಲಿ ನೀಡಲಾಗುತ್ತಿದೆ.<br><br>• ತೀವ್ರ / ಸಾಧಾರಣ ಅಪೌಷ್ಠಿಕ ಮಕ್ಕಳಿಗೆ ಹೆಚ್ಚುವರಿಯಾಗಿ ವಾರದಲ್ಲಿ 3 ದಿನ ಮೊಟ್ಟೆ ಮತ್ತು 3 ದಿನ 200 ಎಂ.ಎಲ್. ಹಾಲನ್ನು ನೀಡಲಾಗುತ್ತಿದೆ. |
| ಆ) | ಪ್ರಸ್ತುತ ಅಂಗನವಾಡಿಗಳಿಗೆ ಸರ್ಕಾರ ವಿವಿಧ ಕಾರ್ಯಕ್ರಮಗಳಿಗೆ ನೀಡುವ ಅನುದಾನದ ಮೊತ್ತವನ್ನು ಯಾವಾಗ ನಿಗದಿಪಡಿಸಲಾಗಿತ್ತು ನಂತರ ಅಂಗನವಾಡಿಗಳ ಕಾರ್ಯಭಾರ ಮತ್ತು ಸೇವೆಗಳ ವಿಸ್ತರಣೆಗೆ ಪೂರಕವಾಗಿ ಪರಿಷ್ಕರಿಸಲಾಗಿದೆಯೇ; ಪರಿಷ್ಕರಿಸಿದ್ದಲ್ಲಿ ಯಾವಾಗ ಪರಿಷ್ಕರಿಸಿದೆ; (ವಿವರ ನೀಡುವುದು) | • ಸಮಗ್ರ ಶಿಶು ಅಭಿವೃದ್ಧಿ ಯೋಜನೆಯಡಿ ಪೂರಕ ಪೌಷ್ಠಿಕ ಆಹಾರಕ್ಕೆ ಕೇಂದ್ರ ಸರ್ಕಾರವು ನವಂಬರ್-2017 ರಲ್ಲಿ ಅನುದಾನದ ಮೊತ್ತ ಮತ್ತು ಘಟಕ ವೆಚ್ಚವನ್ನು ನಿಗದಿಪಡಿಸಿರುತ್ತದೆ. ಪ್ರಸ್ತುತ ಆಗಸ್ಟ್ – 2022ರಲ್ಲಿ ಸಕ್ಷಮ & ಪೋಷಣ್ 2.00 ರಡಿ ಘಟಕ ವೆಚ್ಚವನ್ನು ಹೆಚ್ಚಿಸಿರುವುದಿಲ್ಲ. .<br><br>ಪ್ರಸ್ತುತ ಆಗಸ್ಟ್ – 2022ರಲ್ಲಿ ಸಕ್ಷಮ & ಪೋಷಣ್ 2.00 ರಡಿಯಲ್ಲಿ ವಿವಿಧ ಪರಿಕರಗಳಿಗೆ ಈ ಕೆಳಕಂಡಂತೆ ಘಟಕ ವೆಚ್ಚವನ್ನು ಪರಿಷ್ಕರಿಸಲಾಗಿರುತ್ತದೆ.<br><br>• ಶಾಲಾಪೂರ್ವ ಶಿಕ್ಷಣ ಕಿಟ್ ಖರೀದಿಗೆ ಸಂಬಂಧಿಸಿದಂತೆ ಪ್ರತಿ ಅಂಗನವಾಡಿ ಕೇಂದ್ರಕ್ಕೆ 5 ವರ್ಷಕ್ಕೆ ರೂ.3,000/- ಗಳನ್ನು ಹಾಗೂ ಪ್ರತಿ ವರ್ಷ ರೂ. 1,000/-ಗಳಂತೆ 4 ವರ್ಷಗಳವರೆಗೆ ನಿಗದಿಪಡಿಸಲಾಗಿದೆ.<br><br>• ಔಷಧಿ ಕಿಟ್ ಖರೀದಿಗೆ ಸಂಬಂಧಿಸಿದಂತೆ ಮುಖ್ಯ ಅಂಗನವಾಡಿ ಕೇಂದ್ರಗಳಿಗೆ ವಾರ್ಷಿಕ ರೂ.1,500/- ಮತ್ತು ಮಿನಿ ಅಂಗನವಾಡಿ ಕೇಂದ್ರಗಳಿಗೆ ವಾರ್ಷಿಕ ರೂ.750/- ಗಳನ್ನು ನಿಗದಿಪಡಿಸಲಾಗಿರುತ್ತದೆ.<br><br>• ಪೋಷಣ್ ಅಭಿಯಾನ್ ಯೋಜನೆಯಡಿ ತಿಂಗಳಿಗೆ 02 ಸಮುದಾಯ ಆಧಾರಿತ ಚಟುವಟಿಕೆಗಳನ್ನು ನಡೆಸಲು ರೂ.500/- ಗಳನ್ನು ನಿಗದಿಪಡಿಸಲಾಗಿದೆ. ಇದಕ್ಕೆ ಯಾವುದೇ ಫ್ಲೆಕ್ಸಿ ಫಂಡ್ ನೀಡುತ್ತಿರುವುದಿಲ್ಲ.<br><br>• ಅಂಗನವಾಡಿ ಕಾರ್ಯಕರ್ತೆ / ಸಹಾಯಕಿಯರ 2 ಜೊತೆ ಸಮವಸ್ತ್ರಕ್ಕೆ ಪ್ರತಿಯೊಬ್ಬರಿಗೆ ರೂ.800/- ಗಳನ್ನು ನಿಗದಿಪಡಿಸಲಾಗಿದೆ.<br><br>• ಆಡಳಿತ ವೆಚ್ಚ ಪ್ರತಿ ಅಂಗನವಾಡಿ ಕೇಂದ್ರಗಳಿಗೆ ವಾರ್ಷಿಕ ರೂ. 2000/- ಹಾಗೂ ಮಿನಿ ಅಂಗನವಾಡಿ ಕೇಂದ್ರಗಳಿಗೆ ರೂ. 1000/-ಗಳನ್ನು ನಿಗದಿಪಡಿಸಲಾಗಿದೆ. |

| | | |
|---|---|---|
| | | • **ಪೀಠೋಪಕರಣ /ಪಾಕೋಪಕರಣ ಖರೀದಿ: -** ಪ್ರತಿ ಅಂಗನವಾಡಿ ಕೇಂದ್ರಗಳಿಗೆ ಪ್ರತಿ 5 ವರ್ಷಕ್ಕೊಮ್ಮೆ ರೂ. 10000/- ಹಾಗೂ ಮಿನಿ ಅಂಗನವಾಡಿ ಕೇಂದ್ರಗಳಿಗೆ ರೂ. 7000/-ಗಳನ್ನು ನಿಗದಿಪಡಿಸಲಾಗಿದೆ.<br>• **ಅಂಗನವಾಡಿ ಕೇಂದ್ರಗಳ ಕಟ್ಟಡ ಬಾಡಿಗೆ:-**<br>ಗ್ರಾಮೀಣ/ಬುಡಕಟ್ಟು : ರೂ. 2,000/- ಪ್ರತಿ ತಿಂಗಳಿಗೆ<br>ನಗರ ಪ್ರದೇಶ : ರೂ. 6,000/- ಪ್ರತಿ ತಿಂಗಳಿಗೆ<br>ಮಹಾನಗರ ಪಾಲಿಕೆ : ರೂ. 8,000/- ಪ್ರತಿ ತಿಂಗಳಿಗೆ<br>**ರಾಜ್ಯ ಸರ್ಕಾರದ ಯೋಜನೆಗಳು -**<br>• ಕ್ಷೀರಭಾಗ್ಯ ಯೋಜನೆಯಡಿ ಹಾಲಿನ ದರವನ್ನು ದಿನಾಂಕ: 05/03/2022 ರಿಂದ ಪರಿಷ್ಕರಿಸಲಾಗಿದೆ.<br>• "ಸೃಷ್ಠಿ" ಯೋಜನೆಯಡಿ ಕೋಳಿಮೊಟ್ಟೆಯ ದರವನ್ನು ದಿನಾಂಕ: 10/05/2022 ರಿಂದ ಪರಿಷ್ಕರಿಸಲಾಗಿದೆ. |
| ಇ. | ಅಂಗನವಾಡಿ ಮಟ್ಟದಲ್ಲಿ ಒಂದು ವರ್ಷದಲ್ಲಿ ನಡೆಸಬೇಕಾದ ಒಟ್ಟು ಸಭೆಗಳು, ಕಾರ್ಯಕ್ರಮಗಳು ಎಷ್ಟು; ಪ್ರಸ್ತುತ ಅಂಗನವಾಡಿಗಳಿಗೆ ಸರ್ಕಾರ ನೀಡುತ್ತಿರುವ ಅನುದಾನ ಈ ಎಲ್ಲಾ ಕಾರ್ಯಕ್ರಮಗಳಿಗೆ, ಅಂಗನವಾಡಿಗಳ ನಿರ್ವಹಣೆ ಸಾಕಾಗುವುದೇ; ಇಲ್ಲದಿದ್ದಲ್ಲಿ ಅಂಗನವಾಡಿಗಳ ಖರ್ಚನ್ನು ಹೇಗೆ ಸರಿದೂಗಿಸಲಾಗುತ್ತಿದೆ? (ಸಂಪೂರ್ಣ ವಿವರ ನೀಡುವುದು) | ಪ್ರತಿ ಅಂಗನವಾಡಿ ಮಟ್ಟದಲ್ಲಿ ಬಾಲವಿಕಾಸ ಸಮಿತಿಯನ್ನು ರಚಿಸಲಾಗಿದ್ದು, ಈ ಸಮಿತಿಯು ಪ್ರತಿ ತಿಂಗಳು ಸಭೆಯನ್ನು ನಡೆಸಬೇಕಾಗಿರುತ್ತದೆ. ಅಂದರೆ ವರ್ಷಕ್ಕೆ 12 ಸಭೆಗಳನ್ನು ನಡೆಸಬೇಕಾಗಿರುತ್ತದೆ. ಇದಕ್ಕೆ ಯಾವುದೇ ಅನುದಾನವನ್ನು ಸರ್ಕಾರದಿಂದ ನೀಡುತ್ತಿರುವುದಿಲ್ಲ.<br><br>ಮುಂದುವರೆದು, ಪೋಷಣ್ ಅಭಿಯಾನ್ ಯೋಜನೆಯಡಿ ಅಂಗನವಾಡಿ ಮಟ್ಟದಲ್ಲಿ ಪ್ರತಿ ತಿಂಗಳು 02 ಸಮುದಾಯ ಆಧಾರಿತ ಚಟುವಟಿಕೆಗಳನ್ನು ನಡೆಸಲಾಗುತ್ತಿದೆ. ಪ್ರತಿ ಸಮುದಾಯ ಆಧಾರಿತ ಚಟುವಟಿಕೆಗೆ ರೂ.250/- ರಂತೆ ಪ್ರತಿ ತಿಂಗಳು ರೂ.500/-ಗಳನ್ನು ನೀಡಲು ಅವಕಾಶ ಕಲ್ಪಿಸಲಾಗಿದೆ.<br><br>ಕೆಲವು ಸಂಧರ್ಭಗಳಲ್ಲಿ ಕೇಂದ್ರ ಸರ್ಕಾರದಿಂದ ಯೋಜನೆಯ ಅನುಷ್ಠಾನಕ್ಕಾಗಿ ಅನುದಾನ ಬಿಡುಗಡೆ ವಿಳಂಬವಾದ ಸಂಧರ್ಭಗಳಲ್ಲಿ ಯೋಜನೆಯ ಸಮರ್ಪಕ ಅನುಷ್ಠಾನ ಹಾಗೂ ಫಲಾನುಭವಿಗಳಿಗೆ ಯೋಜನೆಯ ಸೌಲಭ್ಯಗಳನ್ನು ಯಾವುದೇ ರೀತಿಯ ಅಡೆತಡೆಗಳಿಲ್ಲದಂತೆ ತಲುಪಿಸುವ ನಿಟ್ಟಿನಲ್ಲಿ ಕೇಂದ್ರ ಸರ್ಕಾರದಿಂದ ಅನುದಾನ ಬಿಡುಗಡೆಯನ್ನು ನಿರೀಕ್ಷಿಸಿ ರಾಜ್ಯ ಸರ್ಕಾರದ ವತಿಯಿಂದಲೇ ಕೇಂದ್ರದ ಪಾಲಿನ ಅನುದಾನವನ್ನು ಬಿಡುಗಡೆಗೊಳಿಸಿ ಯೋಜನೆ/ ಕಾರ್ಯಕ್ರಮಗಳ ವೆಚ್ಚವನ್ನು ಭರಿಸಲಾಗುತ್ತಿದೆ.<br><br>ಸರ್ಕಾರವು ನಿಗದಿಪಡಿಸಿರುವ ಮೊತ್ತದಲ್ಲಿಯೇ ಖರ್ಚನ್ನು ಸರಿದೂಗಿಸಲಾಗುತ್ತಿದೆ. |

**ಸಂಖ್ಯೆ:ಮಮಇ 303 ಐಸಿಡಿ 2022**

Halappa BA

**(ಆಚಾರ ಹಾಲಪ್ಪ ಬಸಪ್ಪ)**
ಗಣಿ ಮತ್ತು ಭೂ ವಿಜ್ಞಾನ, ಮಹಿಳಾ ಮತ್ತು
ಮಕ್ಕಳ ಅಭಿವೃದ್ಧಿ ವಿಕಲಚೇತನರ ಹಾಗೂ
ಹಿರಿಯ ನಾಗರೀಕರ ಸಬಲೀಕರಣ ಸಚಿವರು.